ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ವಾದಿ ಪರ ಶ್ರೀ ಎ ಎನ್ ಕೆ ವಕೀಲರಿಂದಃ

ದಾವಾ ಐಟಂ-1 ಸ್ವತ್ತು ಕರಾರು ಪತ್ರ ಆಗುವ ಪೂರ್ವದಲ್ಲಿ ಬೆಂಗಳೂರು-ಮೈಸೂರು ರಸ್ತೆಗೆ ಭೂ ಸ್ವಾಧೀನ ಮಾಡುವ ಬಗ್ಗೆ ನೋಟಿಫಿಕೇಷನ್ ಆಗಿರುತ್ತದೆ ಎಂದರೆ ಸರಿ. ಆ ನೋಟಿಫಿಕೇಷನ್ ಪ್ರತಿ ನನ್ನ ಬಳಿ ಇರುತ್ತದೆ. ನೋಟಿಫಿಕೇಷನ್ ದಾವಾ ಸರ್ವೇ ನಂಬರ್ 26/2 ರಲ್ಲಿ 17 ಗುಂಟೆ ಸ್ವತ್ತಿಗೆ ಮಾತ್ರ ಆಗಿರುತ್ತದೆ ಎಂದರೆ ಸರಿಯಲ್ಲ. ಆ ನೋಟಿಫಿಕೇಷನ್ ಪ್ರಕಾರ 7 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಆಗಿರುತ್ತದೆ ಎನ್ನುತ್ತಾರೆ. ಸಾಕ್ಷಿಗೆ ಸದರಿ ನೋಟಿಫಿಕೇಷನ್ ಪ್ರಕಾರ 17 ಗುಂಟೆ ಜಮೀನಿಗೆ ಆಗಿರುತ್ತದೆ ಹೊರತು 7 ಗುಂಟೆ ಆಗಿರುವುದಿಲ್ಲ ಎಂದರೆ ಸಾಕ್ಷಿಗೆ 7 ಗುಂಟೆ ಜಮೀನಿಗೆ ನೋಟಿಫಿಕೇಷನ್ ಆಗಿರುತ್ತದೆ ಎಂದು ನುಡಿಯುತ್ತಾರೆ. ಸ್ವಾಧೀನಪಡಿಸಿಕೊಂಡ ಜಮೀನಿಗೆ ಪರಿಹಾರ ಹಣವನ್ನು 1 ನೇ ಪ್ರತಿವಾದಿ ರಾಮಮೂರ್ತಿ ರವರ ಹೆಸರಿಗೆ ಆಗಿರುತ್ತದೆ ಎಂದರೆ ಸರಿ. ಸದರಿ ಹಣವನ್ನು 1 ನೇ ಪ್ರತಿವಾದಿರವರು ವಿಶೇಷ ಭೂ ಸ್ವಾಧೀನಾಧಿಕಾರಿಗಳಿಂದ ಪಡೆದುಕೊಂಡಿರುತ್ತಾರೆ. ಆ ಬಗ್ಗೆ ನಾನು ದಾಖಲೆಯನ್ನು ಪರಿಶೀಲನೆ ಮಾಡಿರುತ್ತೇನೆ. ಆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

ನಾನು ಹಾಜರುಪಡಿಸಿರುವ ನಿಡಿ-28 ರ ದೂರನ್ನು ನನ್ನ ಸಹೋದರನಿಂದ ಪಡೆದುಕೊಂಡಿರುತ್ತೇನೆ. ನಿಡಿ-28 ರ ದೂರಿನ್ವಯ ಪ್ರಕರಣ ದಾಖಲಾಗಿರುತ್ತದೋ ಇಲ್ಲವೋ ಎಂದು ನಾನು ಪರಿಶೀಲನೆ ಮಾಡಿರುತ್ತೇನೆ. ನಾನು ಸದರಿ ವಿಷಯಕ್ಕೆ ಸಂಬಂಧಿಸಿದಂದತೆ ಪೊಲೀಸರನ್ನು ವಿಚಾರಿಸಿದಾಗ ಪೊಲೀಸರು ಸದರಿ ದೂರಿಗೆ

ಸಂಬಂಧಿಸಿದಂತೆ ಸಿವಿಲ್ ನ್ಯಾಯಾಲಯದಲ್ಲಿ ದಾವೆ ದಾಖಲಿಸುವಂತೆ ಸೂಚಿಸಿರುತ್ತಾರೆ. ನಿಡಿ-28 ಅನ್ನು ಈ ದಾವೆಗಾಗಿ ಸೃಷ್ಟಿಸಲಾಗಿರುತ್ತದೆ ಎಂದರೆ ಸರಿಯಲ್ಲ.

ನಿಡಿ-25 ರ ಪ್ರತ್ಯುತ್ತರದಲ್ಲಿ ದಿನಾಂಕ 17.04.2010 ರಂದು 1 ನೇ ಪ್ರತಿವಾದಿ ನನಗೆ ಬರೆದುಕೊಟ್ಟಿರುತ್ತಾರೆ ಎಂದು ಹೇಳುವ ಜಿಪಿಎ ನನ್ನ ಬಳಿ ಇರುತ್ತದೆ ಎಂದರೆ ಸರಿ. ಸದರಿ ಜಿಪಿಎ ಅನ್ನು ನ್ಯಾಯಾಲಯದಲ್ಲಿ ನೀವು ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ಅದು ನೆನಪು ಬರುತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಜಿಪಿಎ ನ್ಯಾಯಾಲಯಕ್ಕೆ ನಾನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕ 17.04.2010 ರಂದು ಆದ ಜಿಪಿಎ ನೋಂದಣಿಯಾಗಿಲ್ಲ ಜಿಪಿಎ ಆಗಿರುತ್ತದೆ. ಸದರಿ ಜಿಪಿಎ ನಲ್ಲಿ ಸಾಕ್ಷಿದಾರರಾಗಿ ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ನೆನಪಿರುವುದಿಲ್ಲ. ನಿಡಿ-29 ರ ನೋಟಿಸನ್ನು ಪ್ರಸ್ತುತ ದಾವೆ ಸಲ್ಲಿಸಿದ 3 ವರ್ಷಗಳ ನಂತರ ನೀಡಿರುತ್ತೇನೆ ಎಂದರೆ ಸರಿ.

ಓಎಸ್ 124/2015 ರ ದಾವೆಯನ್ನು ಪ್ರಸ್ತುತ ದಾವೆಯ ಚಾಲ್ತಿಯಲ್ಲಿ ಇದ್ದಾಗ ವಾದಿ ಮತ್ತು ಇತರೆ ಪ್ರತಿವಾದಿಗಳ ವಿರುದ್ದ ಸಲ್ಲಿಸಿರುತ್ತೇನೆ ಎಂದರೆ ಸರಿ. ಓಎಸ್ 124/2015 ರ ದಾವೆಯಲ್ಲಿ ಪ್ರಸ್ತುತ ದಾವೆಯ ವಾದಿ ತಕಾರು ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ತಕಾರರನ್ನು ಪ್ರಸ್ತುತ ದಾವೆಯಲ್ಲಿ ನಾನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿಗೆ ಅದನ್ನು ಪ್ರಸ್ತುತ ದಾವೆಯಲ್ಲಿ ಹಾಜರುಪಡಿಸದೇ ಇರುವುದಕ್ಕೆ ಯಾವುದಾದರೂ ಕಾರಣ ಇದೆಯಾ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಓಎಸ್ 124/2015 ರ ದಾವೆಯು

ಸಹ ಇನ್ನು ಚಾಲ್ತಿಯಲ್ಲಿ ಇರುತ್ತದೆ. ಸಾಕ್ಷಿಗೆ ಪ್ರಸ್ತುತ ದಾವೆಯಲ್ಲಿ ನೀಡಿರುವ ಸಾಕ್ಷ್ಯ ವಿಚಾರಣೆಯನ್ನು ಓಎಸ್ 124/2015 ರ ದಾವೆಯಲ್ಲಿ ಅಳವಡಿಸಿಕೊಳ್ಳಲು ನಿಮಗೇನಾದರೂ ತೊಂದರೆ ಇರುತ್ತದೆಯೇ ಎಂದರೆ ಸಾಕ್ಷಿಯು ನಮ್ಮ ವಕೀಲರನ್ನು ಕೇಳಬೇಕಾಗುತ್ತದೆ ಎಂದು ನುಡಿಯುತ್ತಾರೆ. ಓಎಸ್ 124/2015 ರ ದಾವೆಯನ್ನು ಪ್ರಸ್ತುತ ದಾವೆಯ ವಾದಿಗೆ ಸೇರಿರುವ ಸ್ವತ್ತನ್ನು ಕಬಲಿಸುವ ಉದ್ದೇಶದಿಂದ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ದಾವಾ ಸ್ವತ್ತು ವಾದಿಯ ಕುಟುಂಬದ ಪಿತ್ರಾರ್ಜಿತ ಸ್ವತ್ತಾಗಿದ್ದು 1 ನೇ ಪ್ರತಿವಾದಿಗೆ ಕರಾರು ಪತ್ರ ಮಾಡಿಕೊಡುವ ಯಾವುದೇ ಅಧಿಕಾರ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳುವ ಕರಾರು ಪತ್ರವಾಗುವ ಸಮಯದಲ್ಲಿ ದಾವಾ ಸ್ವತ್ತಿನ ಒಂದು ಎಕರೆಗೆ ಜಮೀನು 1 ವರೆ ಕೋಟಿ ಮಾರುಕಟ್ಟೆ ಬೆಲೆ ಇತ್ತು ಎಂದರೆ ಸರಿಯಲ್ಲ. ನಾನು ಮತ್ತು 1 ನೇ ಪ್ರತಿವಾದಿ ಶಾಮಿಲ್ ಆಗಿ ವಾದಿ ಮತ್ತು ಅವರ ಕುಟುಂಬಕ್ಕೆ ದಾವಾ ಸ್ವತ್ತು ದಕ್ಕಬಾರದು ಎಂಬ ಉದ್ದೇಶದಿಂದ 3 ಕರಾರು ಪತ್ರಗಳನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ವಾದಿಗೆ 3 ನೇ ಒಂದು ಭಾಗದ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಮಹೇಶ್ ಬಿ.ಟಿ)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.